ಅ) ಹಂಗಾಮಿ ಲಾಗಣಿ ಜಮೀನಿಗೆ ಈಗ ಪಟ್ಟಾ ಕೊಟ್ಟಿದ್ದು ಇರುವುದಿಲ್ಲ, ಸರ್ಕಾರದ ಆದೇಶ ಸಂ: ಆರ್‌ಡಿ:31:ಎಲ್‌ಜಿಎನ್:87 (ಭಾಗ) ದಿನಾಂಕ: 20-4-94ರ ಪ್ರಕಾರ ಜಿಲ್ಲಾಧಿಕಾರಿಗಳು ಖಾಯಂ ಲಾಗಣಿ ಆದೇಶ ಮಾಡಿದ ನಂತರ ಖಾಯಂ ಲಾಗಣಿದಾರರಿಂದ ಮಾಲ್ಕಿ ಆಕಾರ ಮೋಜಣಿ ಫೀ ಮಸೂಲಿ ಮಾಡಿ ಖಾಯಂ ಲಾಗಣಿ ಪಟ್ಟಾ ಕೊಡಲಾಗಿರುತ್ತದೆ.

ಆ) ಹಂಗಾಮಿ ಲಾಗಣಿ ಜಮೀನು ಸರ್ಕಾರದ ಆದೇಶದಂತೆ ಖಾಯಂ ಲಾಗಣಿ ಆದೇಶ ಮಾಡಿದ ಜಮೀನಿಗೆ ಭೂ ಮಂಜೂರಾತಿ ನಿಯಮದನ್ವಯ ಕಂದಾಯ ಇಲಾಖೆ ಜಮೀನಿನಂತೆ ಕ್ರಮ ಜರುಗಿಸಲಾಗಿದೆ. ಇವೆರಡು ಜಮೀನಿಗೆ ಒಂದೇ ನಿಯಮಗಳಿರುತ್ತವೆ.

ಈ) ಹಂಗಾಮಿ ಲಾಗಣಿ ಜಮೀನು 1980ರ ಅರಣ್ಯ ಸಂರಕ್ಷಣಾ ಕಾಯಿದೆ ಜಾರಿಗೆ ಬರುವ ಪೂರ್ವ ಅರಣ್ಯ ಇಲಾಖೆಯಿಂದ ಬಿಡುಗಡೆ ಆಗಿ ಕಂದಾಯ ಇಲಾಖೆಗೆ ಹಸ್ತಾಂತರವಾದ ಜಮೀನು ಇದ್ದು ಹಂಗಾಮಿ ಲಾಗಣಿ ಮಂಜೂರಿಯಾದ ಪ್ರಕರಣಗಳಲ್ಲಿ ಕಾಯಿದೆ ಲಾಗಣಿ ಆದೇಶ ಮಾಡಲು ಅರಣ್ಯ ಇಲಾಖೆ ಅನುಮತಿ ಅವಶ್ಯವಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಚಾಮರಾಜನಗರ ಜಿಲ್ಲೆಯಲ್ಲಿ ಸುತ್ತ ನಕ್ಸಲಿಯರು ಜಮೀನುಗಳನ್ನು ಖರೀದಿ ಮಾಡುತ್ತಿರುವುದು.

167(330) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಾಮರಾಜನಗರ ಜಿಲ್ಲೆಯಲ್ಲಿ ಸುತ್ತ ನಕ್ಸಲಿಯರು ಜಮೀನುಗಳನ್ನು ಖರೀದಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು;

ಆ) ರಾಜ್ಯದಲ್ಲಿ ಚಾಮರಾಜನಗರದಲ್ಲಿ ಸೇರಿದಂತೆ ವಿವಿಧ ಕಡೆ ಬೇರೆ ರಾಜ್ಯದವರು ಜಮೀನನ್ನು ಖರೀದಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ರೀತಿ ಖರೀದಿ ಮಾಡಿರುವ ಜಮೀನಿನ ವಿಸ್ತೀರ್ಣವೆಷ್ಟು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಇಂತಹ ಪ್ರಕರಣಗಳು ಜಿಲ್ಲೆಯಲ್ಲಿ ಯಾವುದೂ ಇರುವುದಿಲ್ಲ.

ಆ) ಸರ್ಕಾರದ ಗಮನಕ್ಕೆ ಬಂದಿದೆ.

ಇ) ಈ ರೀತಿ ಒಟ್ಟು 2977.05 ಎಕರೆ ಜಮೀನನ್ನು ಚಾಮರಾಜನಗರ ಜಿಲ್ಲೆಯಲ್ಲಿ ಖರೀದಿ ಆಗಿದೆ.

ವಿವರಗಳು :

1)	ಚಾಮರಾಜನಗರ ತಾ:	2822.05
2)	ಗುಂಡ್ಲುಪೇಟೆ ತಾ:	155.00
	ಒಟ್ಟು	2977.05

ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ದುರಸ್ಥಿ

168(331) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದಲ್ಲಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು ಅವುಗಳಲ್ಲಿ ಮುಜರಾಯಿ ಇಲಾಖೆಗೆ ಸೇರಿರುವ ಮತ್ತು ಸೇರದೇ ಇರುವ ದೇವಸ್ಥಾನಗಳ ಸಂಖ್ಯೆ ಎಷ್ಟು;

2) ಆ ಪೈಕಿ ಹೆಚ್ಚಿನ ಆದಾಯ ಬರುವ ದೇವಸ್ಥಾನಗಳು ಯಾವುವು;

3) ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ದುರಸ್ಥಿಗಾಗಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;

4) ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಹಾಗೂ ಸೇರದೇ ಇರುವ ದೇವಸ್ಥಾನಗಳಲ್ಲಿ ಇರುವ ಅರ್ಚಕರ ಸಂಖ್ಯೆ ಎಷ್ಟು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :—

1) ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಒಳಪಟ್ಟ ದೇವಸ್ಥಾನಗಳು 43,217. ಇಲಾಖೆಗೆ ಸೇರದೇ ಇರುವ ದೇವಸ್ಥಾನಗಳ ಬಗ್ಗೆ ಮಾಹಿತಿ ಸದ್ಯಕ್ಕೆ ಲಭ್ಯವಿಲ್ಲ.

2) ಮುಜರಾಯಿ ಇಲಾಖೆಗೆ ಒಳಪಟ್ಟ ಪ್ರಮುಖ ದೇವಸ್ಥಾನಗಳ ಪೈಕಿ ವಾರ್ಷಿಕ ರೂ.10.00 ಲಕ್ಷಕ್ಕಿಂತಲೂ ಅಧಿಕ ಆದಾಯವಿರುವ ದೇವಸ್ಥಾನಗಳ ಪಟ್ಟಿಯನ್ನು ಲಗತ್ತಿಸಿದೆ.

3) ದುರಸ್ಥಿ : ಜೀರ್ಣೋದ್ಧಾರಕ್ಕಾಗಿ ಪ್ರತೀ ವರ್ಷವು ಆಯವ್ಯಯದಲ್ಲಿ ಒದಗಿಸುವ ಮೊತ್ತದಲ್ಲಿ ಮುಜರಾಯಿ ಹಾಗೂ ಮುಜರಾಯೇತರ ದೇವಾಲಯಗಳಿಗೆ ಮಂಜೂರು ಮಾಡಲಾಗುತ್ತಿದೆ.

4) ಮುಜರಾಯಿ ಇಲಾಖೆಗೆ ಸೇರಿರುವ ದೇವಸ್ಥಾನಗಳಲ್ಲಿ ಇರುವ ಅರ್ಚಕರು ಒಟ್ಟು 30,111, ಇಲಾಖೆಗೆ ಸೇರದೇ ಇರುವ ದೇವಸ್ಥಾನಗಳ ಬಗ್ಗೆ ಮಾಹಿತಿ ಸಧ್ಯಕ್ಕೆ ಲಭ್ಯವಿಲ್ಲ.